ಆ) ಹೌದು

ಇ) ಕೈಗಾರಿಕಾ ನೀತಿಯಲ್ಲಿ ಘೋಷಿಸಿರುವ ರಿಯಾಯಿತಿ ಮತ್ತು ಸೌಲಭ್ಯಗಳನ್ನು ಪಡೆದು ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಸ್ಥಾಪನೆಯಾಗುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸಿಗುತ್ತದೆ ಈ ದಿಸೆಯಲ್ಲಿ ಕೈಗಾರಿಕಾ ನೀತಿಯಂತೆ ಸ್ಥಳೀಯರಿಗೆ ಶೇ 80 ರಷ್ಟು ಉದ್ಯೋಗಾವಕಾಶ ಸಿಗುವ ಅವಕಾಶವಿದೆ

ಈ) ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳ ಪ್ರಸ್ತಾವನೆ ಅನುಮೋದಿಸುವ ಸಂದರ್ಭದಲ್ಲಿ ಸ್ಥಳೀಯರಿಗೆ 2006–11ರ ಕೈಗಾರಿಕಾ ನೀತಿಯಂತೆ ಉದ್ಯೋಗಾವಕಾಶ ಕಲ್ಪಿಸಬೇಕು ಎಂಬ ಷರತ್ತನ್ನು ಸರ್ಕಾರಿ ಆದೇಶದಲ್ಲಿ ಅಳವಡಿಸಲಾಗುತ್ತಿದೆ

745 (386) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಣ್ಣ ನೀರಾವರಿ ಕೆರೆಗಳ ಸಂಖ್ಯೆ ಎಷ್ಟು , (ಜಿಲ್ಲಾವಾರು ಮಾಹಿತಿ ನೀಡುವುದು) ,

ಆ) 2005–06, 2006–07ನೇ ಸಾಲಿನಲ್ಲಿ ಕೆರೆಗಳ ಅಭಿವೃದ್ಧಿಗೆ ಸರ್ಕಾರ ನೀಡಿರುವ ಅನುದಾನವೆಷ್ಟು ,

ಇ) ಈವರೆವಿಗೂ ಈ ಕೆರೆಗಳ ದುರಸ್ಥಿಗಾಗಿ ಮಂಜೂರಾಗಿರುವ ಬಾಬ್ತು ಪಾವತಿಯಾಗದೆ ಬಾಕಿ ಉಳಿದಿರುವ ಹಣವೆಷ್ಟು ,

ಈ) ಸರ್ಕಾರ ಈ ಬಾಕಿ ಉಳಿದಿರುವ ಹಣಕ್ಕೆ ತೆಗೆದುಕೊಂಡಿರುವ ಕ್ರಮವೇನು ,

ಉ) ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಕೆರೆಗಳ ಅಭಿವೃದ್ಧಿಗೆ 2005–06, 2006–07ನೇ ಸಾಲಿನಲ್ಲಿ ಬಿಡುಗಡೆಯಾದ ಹಣವೆಷ್ಟು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)

ಅ) ಅನುಬಂಧದಲ್ಲಿ ನೀಡಲಾಗಿದೆ

ಆ) 2005–06ನೇ ಸಾಲಿನಲ್ಲಿ 12807 30 ಲಕ್ಷ ರೂ ಗಳು, 2006–07ನೇ ಸಾಲಿನಲ್ಲಿ 41985 44 ಲಕ್ಷ ರೂ ಗಳನ್ನು ಒದಗಿಸಲಾಗಿದೆ

ಇ) ಪ್ರಸಕ್ತ ಸಾಲಿನಲ್ಲಿ ಮಂಜೂರಾಗಿರುವ ಮೊತ್ತ 41985 44 ಲಕ್ಷ ರೂ ಗಳು ಉಳಿದಿರುವ ಮೊತ್ತ 36157 52 ಲಕ್ಷ ರೂ ಗಳು

22639 00 ಲಕ್ಷ ರೂ ಗಳನ್ನು ಅಧ್ಯರ್ಪಣೆ ಮಾಡಲು ಪ್ರಸ್ತಾಪಿಸಿದ್ದು, ಉಳಿಯುವ ಮೊತ್ತವನ್ನು 2007ರ ಅಂತ್ಯದವರೆಗೆ ವೆಚ್ಚ ಮಾಡಲು ಯೋಜಿಸಲಾಗಿದೆ

Pl
ಇ

ಈ)

ವರ್ಷ	ಬಿಡುಗಡೆ ಮಾಡಿದ ಮೊತ್ತ (ಲಕ್ಷ ರೂ ಗಳಲ್ಲಿ)
2005–06	ಇಲ್ಲ
2006–07	125 00

746 (387) ಶ್ರೀ ಧ್ರುವನಾರಾಯಣ ಆರ್ (ಸಂತೇಮರಳ್ಳಿ) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಹೊರ ರಾಜ್ಯಕ್ಕೆ ಹೋದ "ಫ್ಯಾಬ್ ಸಿಟಿ"ಯ ನಿರ್ಮಾಣಕ್ಕಾಗಿ ನಿಗದಿ ಪಡಿಸಿದ ಜಮೀನಿನಲ್ಲಿ ಈಗ ಯಾವ ಕೈಗಾರಿಕೆಯನ್ನು ಸ್ಥಾಪಿಸಲು ಸರ್ಕಾರ ಮೀಸಲಿಡಿಸಲಾಗಿದೆ ,

ಆ) "ಫ್ಯಾಬ್ ಸಿಟಿ" ಹೊರ ರಾಜ್ಯಕ್ಕೆ ಹೋಗಲು ಕಾರಣವೇನು ,

ಇ) ಇದು ಸ್ಥಾಪನೆಯಾಗಿದ್ದಲ್ಲಿ, ಸುಮಾರು 25 ಸಾವಿರ ಜನಕ್ಕೆ ಉದ್ಯೋಗಾವಕಾಶ ದೊರಕುತ್ತಿರಲಿಲ್ಲವೆ ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ) "ಫ್ಯಾಬ್ ಸಿಟಿ"ಯ ನಿರ್ಮಾಣಕ್ಕಾಗಿ ನಿಗದಿಪಡಿಸಿದ ಜಮೀನಿನ ಭೂಸ್ವಾಧೀನ ಕ್ರಮ ಮುಂದುವರೆದಿದೆ ರಾಜ್ಯ ಸರ್ಕಾರ ಫ್ಯಾಬ್ ಸಿಟಿ ಪ್ರಸ್ತಾವನೆಯನ್ನು ಬೇರೆ ಆಸಕ್ತ ಪ್ರವರ್ತಕರೊಂದಿಗೆ ಮುಂದುವರೆಸಲು ಉತ್ಸುಕರಾಗಿದ್ದು, ಈ ಬಗ್ಗೆ ಪ್ರಸ್ತಾವನೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ

ಆ) ಕರ್ನಾಟಕ ರಾಜ್ಯ ಫ್ಯಾಬ್ ಘಟಕಗಳನ್ನು ಪ್ರೋತ್ಸಾಹಿಸಲು ವಿಶೇಷ ನೀತಿಯನ್ನು ಪ್ರಕಟಿಸಿದ್ದು, ಭಾರತ ಸರ್ಕಾರವೂ ಸಹ ಈ ಬಗ್ಗೆ ಒಂದು ವಿಶೇಷ ನೀತಿಯನ್ನು ಸಧ್ಯದಲ್ಲೇ ಹೊರಡಿಸಲಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ ಭಾರತದಲ್ಲಿ ಮೊದಲ ಫ್ಯಾಬ್ ಸಿಟಿ ಸ್ಥಾಪಿಸಲು ಮುಂದೆ ಬಂದಿದ್ದ ಒಂದು ವಿದೇಶಿ ಕಂಪನಿ ಹೊರ ರಾಜ್ಯದಲ್ಲಿ ಸ್ಥಾಪಿಸಲು ನಿರ್ಧರಿಸಿರುವ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದ್ದು ಅದು ಆ ಕಂಪನಿಯ ನಿರ್ಧಾರವಾಗಿರುತ್ತದೆ

ಇ) ಹೌದು (ಯೋಜನಾ ಪ್ರವರ್ತಕರ ಅಂದಾಜಿನಂತೆ) ಇಲ್ಲಿ ಫ್ಯಾಬ್ ಸಿಟಿ ಅಥವಾ ಇತರೇ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಯತ್ನಿಸಲಾಗುತ್ತಿದ್ದು ಹಾಗೆ ಸ್ಥಾಪನೆಯಾದ ನಂತರ ಉದ್ದೇಶಿತ ಉದ್ಯೋಗಾವಕಾಶ ದೊರೆಯುತ್ತದೆ